**ವ್ಯಾಖ್ಯಾನ**

# <u>ಆಚಾರ್ಯರೆಂದರಿವರು</u>

**Ref.**: Haridasa Hrudaya, by Dr. A.B. Shamachar, published by Srimadwagrantha Prakashana, Bengaluru – 26 (2016), page No. 112.

ಆಚಾರ್ಯರೆಂದರಿವರು

ಯಾರು ಶಾಸ್ತ್ರೋಕ್ತ ಆಚಾರದಲ್ಲಿ ರತರಾಗಿ, ಶಾಸ್ತ್ರಾರ್ಥಗಳನ್ನು ತಿಳಿಸಿಕೊಡುವ ಮಾರ್ಗದರ್ಶಕರೋ ಅವರು ಆಚಾರ್ಯರು. ಅನೂಚೀನ ಸಂಪ್ರದಾಯಗಳಿಗೆ ಬದ್ಧನಾದವನು ಆಚಾರ್ಯನು. ಇಂದ್ರಿಯ, ದೇಹ, ಮನಸ್ಸು, ಬುದ್ಧಿ ಶುದ್ಧವಾಗಿದ್ದು ಆಧ್ಯಾತ್ಮ ವಿದ್ಯೆಯನ್ನು ಬೋಧಿಸುವವನು. ಅದರಂತೆ ನಡೆಯುವವನು ಆಚಾರ್ಯನು. ಕಾಯೇನ ವಾಚಾ-ಮನಸಾ ಏಕತ್ವ ಹೊಂದಿ, ಸಮತ್ವವನ್ನೂ ತಿಳಿದ ಜ್ಞಾನಿಯು ಆಚಾರ್ಯನು. ಹೀಗಿರುವ ಆಚಾರ್ಯನನ್ನು ವೇದವು **'ಆಚಾರ್ಯದೇವೋ ಭವ'** ಎಂದಿತು. ಶ್ರೀ ಪುರಂದರ ದಾಸರು **ಆ- ಚಾ - ರು** ಎಂಬುದರ ಬಗ್ಗೆ ಮಾಡಿರುವ ವಿಶ್ಲೇಷಣೆ ಹೀಗಿದೆ -

**ಆಚಾರಿಯರೆಂಬವರ ಇವರ ನೋಡಿ || ಪ ||**
**ಆಚಾರ ಬಲ್ಲವರೆ ಆಚಾರಿಯರು || ಅಪ ||**

**ಆ ಎಂದರೆ ಅತಿ ತತ್ವವ ತಿಳಿದವರು**
**ಅದ್ವೈತ ಮತ ಧ್ವಂಸ ಮಾಡುವರು**
**ಅತಿಥಿ ಅಭ್ಯಾಗತರಿಗೆ ಅನ್ನವನ್ನೆ ಇಕ್ಕುವರು**
**ಆಯುತ ವೃತ್ತಿಯನ್ನೆ ಮಾಡುವರು || 1 ||**

**ಚಾ ಎಂದರೆ ಚಂಚಲಾತ್ಮವನೆ ಅಳಿದವರು**
**ಚೆನ್ನಾಗಿ ವೇದ ಶಾಸ್ತ್ರವನೆ ಓದಿದವರು**
**ಚಲನೆಯಿಲ್ಲದೆ ಗುರು ಹಿರಿಯರಿಗೆ ಎರಗುವರು**
**ಚಾನಸ ಬಿಟ್ಟವರು ಆಚಾರಿಯರು || 2 ||**

**ರು ಎಂದರೆ ಋಣವ ಮಾಡದಿದ್ದವರು**

**ರಿಪು ಮಿತ್ರ ಸಮರೆಂದು ನೋಡುವರು**
**ರೌಪ್ಯ ಸುವರ್ಣವನು ಮೃತ್ತಿಕೆಯೆಂದು ನೋಡುವರು**
**ರಮಾಧವ ಪುರಂದರ ವಿಠಲನ ಬಲ್ಲವರೇ ಆಚಾರಿಯರು || 3 ||**

ಇಲ್ಲಿ ದಾಸರು ಆಚಾರ್ಯ ಎನ್ನುವ ಪದವಿಡಿದು ಎಲ್ಲ ಅಂತರಂಗ - ಬಹಿರಂಗ ವಿಷಯಗಳನ್ನು ಮಾರ್ಮಿಕವಾಗಿ ನಿರೂಪಿಸಿರುವರು. ಈ ಗುಣ ಧರ್ಮಗಳು ಎಷ್ಟರಮಟ್ಟಿಗೆ ನಮ್ಮಲ್ಲಿದೆ ಎಂಬುದನ್ನು ಆತ್ಮಾವಲೋಕನ ಮಾಡಿಕೊಳ್ಳಬೇಕು. ಆಚಾರ - ವಿಚಾರಗಳನ್ನು ತಿಳಿಸಿಕೊಡುವವರೆ ಆಚಾರ್ಯರೆನ್ನಿಸುವರು, ಎಂದ ಮೇಲೆ ಅವರಲ್ಲಿ ಎಷ್ಟು ನೈಜವಾಗಿರಬೇಕೆಂಬುದನ್ನು ತಿಳಿದಿರಬೇಕು. ಶ್ರೀಕೃಷ್ಣ **'ಯದ್ಯದಾಚರತಿ ಶ್ರೇಷ್ಠಹ ತತ್ತದೇವೇತರೋಜನಃ'** ಶ್ರೇಷ್ಠರೆನ್ನಿಸಿದವರ ನಡೆ-ನುಡಿಯನ್ನು ಇತರರು ಅನುಸರಿಸುವರು ಎಂದು ಹೇಳಿರುವುದರಿಂದ, ಆಚಾರ್ಯರೆಂದೆನಿಸಿಕೊಂಡವರ ನಡೆ - ನುಡಿಗಳು ಮಾರ್ಗದರ್ಶಕವಾಗಿರಬೇಕಲ್ಲವೆ ? ಬ್ರಹ್ಮಾಂಡದಲ್ಲಿ ಪ್ರಪ್ರಥಮ ಆಚಾರ್ಯರು ವಾಯುದೇವರ ಅವತಾರರಾದ ಶ್ರೀಮದಾನಂದತೀರ್ಥರು. ತ್ರೈಲೋಕ್ಯಾಚಾರ್ಯರು ಅದಕ್ಕೆ 'ಆಚಾರ್ಯಃ ಪವನೋಸ್ಮಾಕಮ್' ಎಂದರು ಶ್ರೀ ವಾದಿರಾಜ ಯತಿವರ್ಯರು.

* * * * * *

**ಲೇಖಕರು:** Dr. A. B. ಶಾಮಾಚಾರ್, ಬೆಂಗಳೂರು (ಲೇಖಕರ ಅನುಮಾನತಿಯೊಂದಿಗೆ).